ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/ 51 /2024

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಭವನ.
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:22-07-2024.

-:: ಸುತ್ತೋಲೆ ::-

ವಿಷಯ:- 2024-25ನೇ ಶೈಕ್ಷಣಿಕ ಸಾಲಿನ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಸೆಮಿಸ್ಟರ್ ಮತ್ತು ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಪ್ರವೇಶಗಳಿಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ:-
1. ಸರ್ಕಾರದ ಆದೇಶ ಸಂ. ಇಡಿ 107 ಟಿಪಿಇ 1987, ದಿ:28-07-1987.
2. ಸರ್ಕಾರದ ಪತ್ರ ಸಂ. ಇಡಿ 56 ಡಿಟಿಇ 2024, ದಿ:29-04-2024.
3. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTEADMI0/ACM2/22/2024, ದಿ:07-05-2024 (ಸರ್ಕಾರಿ/ಅನುದಾನಿತ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ) ಹಾಗೂ ಈ ಕಛೇರಿ ಸಮಸಂಖ್ಯೆ ಸುತ್ತೋಲೆ ಪತ್ರ ದಿನಾಂಕ: 07.05.2024, 31.05.2024, 05.06.2024, 14.06.2024, 01.07.2024 (ಸರ್ಕಾರಿ ಪಾಲಿಟೆಕ್ನಿಕ್‌ಗಳು).
4. ಈ ಕಛೇರಿ ಪತ್ರ ಸಂ. DTEADMI0/ACM2/34/2024, ದಿ:07.06.2024 (ಸರ್ಕಾರಿ/ಅನುದಾನಿತ ಲ್ಯಾಟರಲ್ ಎಂಟ್ರಿ ತೃತೀಯ ಸೆಮಿಸ್ಟರ್ ಡಿಪ್ಲೋಮಾ).

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3) & (4)ರಲ್ಲಿನ ಪ್ರವೇಶಾಧಿಸೂಚನೆ ಪತ್ರಗಳಲ್ಲಿ ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಡಿಪ್ಲೋಮಾ ಪ್ರವೇಶಕ್ಕಾಗಿ ಚಾಲ್ತಿಯಲ್ಲಿರುವ ವಿವಿಧ ನಿಯಮಗಳು ಮತ್ತು ಸರ್ಕಾರಿ ಆದೇಶಗಳಲ್ಲಿ ಸೂಚಿಸಿರುವ ಅಂಶಗಳನ್ನು ಸ್ಪಷ್ಟವಾಗಿ ಗಮನದಲ್ಲಿರಿಸಿಕೊಂಡು ಪ್ರವೇಶ ಮಾಡಿಕೊಳ್ಳಬೇಕೆಂದು ಸಂಸ್ಥೆಯ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿತ್ತು ಈ ಪ್ರಕಾರ ಈಗಾಗಲೇ ಪ್ರಸಕ್ತ ಸಾಲಿನ ಪ್ರವೇಶ ಪ್ರಕ್ರಿಯೆಗಳು ಪ್ರಗತಿಯ ಹಂತದಲ್ಲಿರುತ್ತವೆ.

ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಅನುಮತಿಸಿರುವಂತೆ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಹಾಗೂ ಮೆರಿಟ್ ಹಾಗೂ ರೋಷ್ಟರ್ ಆಫ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಮೇಲೆ ಪ್ರಾಂಶುಪಾಲರ ಹಂತದಲ್ಲಿಯೇ ಸೀಟು ಹಂಚಿಕೆ ಮಾಡಲು ಅವಕಾಶ ಕಲ್ಪಿಸಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಮತ್ತು ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.

2024-25ನೇ ಸಾಲಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಮಾಡಿಕೊಂಡಂತಹ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕಛೇರಿ ಸಿಬ್ಬಂದಿಗಳಾದ ರಿಜಿಸ್ಟ್ರಾರ್, ಅಧೀಕ್ಷಕರು, ವಿಷಯ ನಿರ್ವಾಹಕರು ಹಾಗೂ ಉಪನ್ಯಾಸಕರನ್ನೊಳಗೊಂಡಂತೆ ತಂಡವನ್ನು ರಚಿಸಿಕೊಂಡು ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಪ್ರವೇಶಾನುಮೋದನೆ ನೀಡುವ ಬಗ್ಗೆ ಸಹಿ ಮಾಡುವ ಅಧಿಕಾರವನ್ನು ಆಯಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಆಯುಕ್ತರ ಪರವಾಗಿ ಪ್ರತ್ಯಾಯೋಜಿಸಲಾಗಿದೆ.

- **ಎಸ್.ಎಸ್.ಎಲ್.ಸಿ / ಐ.ಟಿ.ಐ / ಪಿಯುಸಿ(ವಿಜ್ಞಾನ/ತಾಂತ್ರಿಕ ವಿಷಯಗಳು) ಮೂಲ ಅಂಕಪಟ್ಟಿ**
- **Admission Allotment Order (ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳಿಗೆ ಮಾತ್ರ)**
- **ವರ್ಗಾವಣೆ ಪ್ರಮಾಣ ಪತ್ರ(TC) / ಆಕ್ಷೇಪಣಾ ರಹಿತ ಪ್ರಮಾಣ ಪತ್ರ (NOC) (ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆಯಿಂದ ಮಾತ್ರ ಧೃಡೀಕೃತ)**
- **ಪ.ಜಾ / ಪ.ಪಂ / ಪ್ರವರ್ಗ-1 ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿರ ಅಡಿಯಲ್ಲಿ ಪ್ರವೇಶ ಪಡೆದವರ ಜಾತಿ ಮತ್ತು ಆದಾಯ ವರಮಾನ ಪ್ರಮಾಣ ಪತ್ರ**
- **ಕನ್ನಡ ಮಾಧ್ಯಮ/ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ**
- **ಕರ್ನಾಟಕದಲ್ಲಿ 05 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರ (ಸಂಬಂಧಿಸಿದ ಬಿ.ಇ.ಓ ಗಳಿಂದ ಮೇಲು ರುಜು ಮಾಡಿಸಿರಬೇಕು)**
- **ಕಲ್ಯಾಣ - ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರ**
- **5(2) ನಿಯಮ ವಿಶೇಷ ಗುಂಪಿನ ಮೀಸಲಾತಿ (Special Category Quota) ಕೋಟಾದ ಪ್ರಮಾಣ ಪತ್ರ**
- **Physical Fitness Certificate (ಸೂಕ್ತ ವೈಧ್ಯಾಧಿಕಾರಿಗಳಿಂದ)**
- **ಅರ್ಹತಾ ಪ್ರಮಾಣ ಪತ್ರದ ಪ್ರತಿ (ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಲ್ಪಡುವ ಎಸ್.ಎಸ್.ಎಲ್.ಸಿ ಯಾಗಿಲ್ಲದ ಎಲ್ಲಾ ಅಭ್ಯರ್ಥಿಗಳಿಗೂ ಅನ್ವಯಿಸುವಂತೆ)**
- **ಮೂಲ ವಲಸೆ ಪ್ರಮಾಣ ಪತ್ರ (ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ),**

ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಉಪನ್ಯಾಸಕರ/ಸಿಬ್ಬಂದಿಯವರ ತಂಡವನ್ನು ರಚಿಸಿಕೊಂಡು ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ ಅಡಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಅಗತ್ಯ ಎಲ್ಲಾ ಮೂಲ ದಾಖಲಾತಿಗಳ ಪ್ರಮಾಣ ಪತ್ರಗಳನ್ನು

ನಿಯಮಾನುಸಾರ ಪರಿಶೀಲಿಸಿ ತಂಡದವರು ಪರಿಶೀಲಿಸಿದ ದಾಖಲಾತಿಗಳ ಆಧಾರದ ಮೇಲೆ ಪ್ರವೇಶಾನುಮೋದನೆಯನ್ನು ಪ್ರಾಂಶುಪಾಲರ ಹಂತದಲ್ಲೇ ನೀಡುವುದು. ಆದುದರಿಂದ ಪ್ರವೇಶ ನೀಡಲಾದ ದಾಖಲಾತಿಗಳಲ್ಲಿ ನ್ಯಾಯಾಲಯ ಪ್ರಕರಣ ಮತ್ತು ಸಾರ್ವಜನಿಕರು ಕೋರುವ ಪೂರ್ಣ ಮಾಹಿತಿಯನ್ನು ಆಯಾ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರೇ ನೀಡಬೇಕೆಂಬ ಷರತ್ತುಗೊಳಿಪಟ್ಟು ವಿದ್ಯಾರ್ಥಿಗಳ ದಾಖಲೆಗಳ ಕುರಿತು ಮುಂದೆ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಪ್ರಾಂಶುಪಾಲರು ಹಾಗೂ ತಂಡದವರೇ ನೇರ ಹೊಣೆಗಾರರಾಗಿರುತ್ತಾರೆ.

ತಮ್ಮ ಹಂತದಲ್ಲಿ ಮಾಡಿಕೊಂಡಿರುವ ಪ್ರವೇಶಾತಿಯ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಅನುಮೋದನೆ ನೀಡಿದ ವಿದ್ಯಾರ್ಥಿಗಳ ಕ್ರಮಬದ್ಧವಾಗಿರುವ ಪ್ರವೇಶಾತಿ ವಿವರಗಳನ್ನು SSLC ಅಂಕಪಟ್ಟಿಯಲ್ಲಿದಂತೆ ವಿದ್ಯಾರ್ಥಿಗಳ ವಿವರಗಳನ್ನು http://dtetech.karnataka.gov.in/dteone/emp/Login.aspx ಲಿಂಕ್‌ನಲ್ಲಿ **ದಿನಾಂಕ:03.08.2024ರವರೆಗೆ** ಅಪ್-ಲೋಡ್ ಮಾಡಿ, ತದನಂತರ ಅಭ್ಯರ್ಥಿಗಳ ಪಟ್ಟಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಪ್ರವೇಶಾನುಮೋದನೆ ಪಟ್ಟಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹೆಸರುಗಳ ಮುಂದೆ ಅವರುಗಳ ಇತ್ತೀಚಿನ ಭಾವಚಿತ್ರವನ್ನು (Photo) ಲಗತ್ತಿಸಿ, ಭಾವಚಿತ್ರದ ಮೇಲೆ ಪ್ರಿನ್ಸಿಪಾಲರ ಸಹಿ ಹಾಗೂ ಸಂಸ್ಥೆಯ ಮೊಹರುನೊಂದಿಗೆ ಧೃಡೀಕರಿಸತಕ್ಕದ್ದು. ಪ್ರವೇಶಾನುಮೋದನೆಯ ಪಟ್ಟಿಯಲ್ಲಿ ಪ್ರತಿ ಕೋರ್ಸಿನ ಕೊನೆಯಲ್ಲಿಯೂ ಸಹ ಸಂಸ್ಥೆಯ ಮೊಹರುನೊಂದಿಗೆ ಸಹಿಯನ್ನು ಮಾಡತಕ್ಕದ್ದು.

ಪ್ರವೇಶಾನುಮೋದನಾ ಪಟ್ಟಿಯ ಪ್ರತಿ ಕೋರ್ಸಿನ ಕೊನೆಯ ಪುಟದಲ್ಲಿ ಪ್ರವೇಶಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರವೇಶ ನಿಯಮಗಳನುಸಾರವೇ ಕೈಗೊಂಡಿದ್ದು ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲವೆಂಬ ಬಗ್ಗೆ ಧೃಡೀಕರಣ ಪ್ರಮಾಣ ಪತ್ರಗಳನ್ನು ದಾಖಲಿಸಬೇಕು. ಪ್ರಾಂಶುಪಾಲರ ಹಂತದಲ್ಲಿ ಅನುಮೋದಿಸಿದ ಪ್ರವೇಶಾನುಮೋದನೆಯ ಪಟ್ಟಿಗಳನ್ನು ಆಯುಕ್ತಾಲಯಕ್ಕೆ ತ್ರಿಪ್ರತಿಯಲ್ಲಿ ಈ ಕೆಳಕಂಡ ದಾಖಲಾತಿಯೊಂದಿಗೆ ಸಲ್ಲಿಸತಕ್ಕದ್ದು.

(1) DCTE COPY
(2) EXAMINATION BOARD COPY
(3) COLLEGE COPY

- **ದಾನಿಗಳ ಕೋಟಾದಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರಿಂದ ಮೊದಲೇ ಅನುಮೋದನೆ ಪಡೆದಿರಬೇಕು. ಹಾಗೂ ಇದಕ್ಕೆ ಸಂಬಂಧಿಸಿದ ದಾಖಲೆಯ ಜೆರಾಕ್ಸ್**
- **ರಿಪೀಟರ್ ಕೋಟಾದಲ್ಲಿ ಪ್ರಥಮ ಸೆಮಿಸ್ಟರ್‌ಗೆ ಮಾತ್ರ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಸಂಬಂಧಿಸಿದ ಹಿಂದಿನ ವರ್ಷದ ಪ್ರವೇಶಾನುಮೋದನೆಯ ಜೆರಾಕ್ಸ್ ಪ್ರತಿ.**

ಅನುಮೋದನೆ ಪಡೆದ ಒಂದು ಪ್ರತಿಯನ್ನು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಇದಲ್ಲದೆ ಅನರ್ಹ ಅಭ್ಯರ್ಥಿಗಳು ನಿಗದಿತ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶ ಹಾಗೂ ಪ್ರವೇಶಕ್ಕೆ ಅಂತಿಮ ದಿನಾಂಕ ಮುಗಿದ ನಂತರ ಪ್ರವೇಶ ಮಾಡಿಕೊಂಡಿದ್ದಲ್ಲಿ ಯಾವುದೇ ಕಾರಣಕ್ಕೂ ಅಂತಹ ಅಭ್ಯರ್ಥಿಗಳ ಪ್ರವೇಶವನ್ನು ಅನುಮೋದಿಸಬಾರದು. ಹಾಗೂ ಅಂತಹವರು ತಾಂತ್ರಿಕ ಪರೀಕ್ಷಾ ಮಂಡಳಿಯ ಯಾವುದೇ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲ ಎಂದು ತಿಳಿಸಲಾಗಿದೆ.

ಇಲಾಖೆಯ ನಿಯಮ, ನಿರ್ದೇಶನ ಸೂಚನೆಗಳನ್ನು ಅನುಸರಿಸದೆ ಪ್ರವೇಶ ನೀಡಿದ್ದಲ್ಲಿ, ಮುಂದೆ ಉದ್ಭವಿಸುವ ಯಾವುದೇ ವಿಧವಾದ ಸಮಸ್ಯೆಗಳಿಗೆ ಸಂಸ್ಥೆಯ ಪ್ರಿನ್ಸಿಪಾಲರು/ಪ್ರವೇಶ ತಂಡದವರೇ ಪೂರ್ಣ ಜವಾಬ್ದಾರರಾಗುತ್ತಾರೆ ಎಂದು ತಿಳಿಸಲಾಗಿದೆ. ಪ್ರವೇಶಾನುಮೋದನೆಯ ಯಾವುದೇ ಮಾಹಿತಿ/ವಿವರಗಳು ಬೇಕಾಗಿದ್ದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಎಸಿಎಂ ವಿಭಾಗದ ಅಧಿಕಾರಿಗಳನ್ನು/ಸಿಬ್ಬಂದಿಯವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ **https://dtek.karnataka.gov.in/** ವೆಬ್‌ಸೈಟ್‌ನ್ನು ಆಗಿಂದಾಗ್ಗೆ ಪ್ರತಿನಿತ್ಯ ವೀಕ್ಷಿಸಿ ಮಾಹಿತಿಯನ್ನು ಪಡೆಯತಕ್ಕದ್ದು.

***"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"***

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ,**

**ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ.**

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು (ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು – ಸಂಸ್ಥೆಗಳ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳಿಗೆ ಪ್ರವೇಶಾನುಮೋದನೆ ನೀಡಿದವರಿಗೆ ಮಾತ್ರ ಪರೀಕ್ಷಾ ಪ್ರವೇಶ ಪತ್ರಗಳನ್ನು ನೀಡಲು ಕೋರಿದೆ.